**ದಿನಾಂಕ: 27/06/2022ರಂದು** ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು ಇವರು ಚಂದಾಪುರ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ದಂಡೆ ಸ. ನಂ. 2 (ಪಿ) ಗ್ರಾಮಠಾಣ ಮತ್ತು 47 ಚಂದಾಪುರ ಗ್ರಾಮಠಾಣ, ಚಂದಾಪುರ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 30.00 ಎಕರೆ ಪ್ರದೇಶದಲ್ಲಿ, ವರ್ಷಕ್ಕೆ 1,32,418 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ ಮಾಡಲು **ಉದ್ದೇಶಿಸಿರುವ ಬಗ್ಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಚಂದಾಪುರ ಗ್ರಾಮದ ಚಂದಾಪುರ ಮರಳು ಬ್ಲಾಕ್‌ನಲ್ಲಿ ತುಂಗಭದ್ರಾ ನದಿ ದಂಡೆ ಸ.ನಂ. 2 (ಪಿ) ಗ್ರಾಮಠಾಣ ಮತ್ತು 47 ಚಂದಾಪುರ ಗ್ರಾಮಠಾಣದಲ್ಲಿ |
| ದಿನಾಂಕ | 27/06/2022 |
| ಅಧ್ಯಕ್ಷತೆ | ಡಾ: ಎನ್. ತಿಪ್ಪೇಸ್ವಾಮಿ, ಕ.ಆ.ಸೇ.<br>ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪರಿಸರ ಸಾರ್ವಜನಿಕ ಸಭೆ ಸಮಿತಿ, ಹಾವೇರಿ ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ–1 |
| ಯೋಜನಾದಾರರ ವತಿಯಿಂದ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ–2 |
| ಭಾಗವಹಿಸಿದ ಸಾರ್ವಜನಿಕರ ವಿವರ | ಅನುಬಂಧ–3 |
| ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿ | ಅನುಬಂಧ–4 |

**ಪೀಠಿಕೆ:–**

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಇವರು ಚಂದಾಪುರ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ದಂಡೆ ಸ. ನಂ. 2 (ಪಿ) ಗ್ರಾಮಠಾಣ ಮತ್ತು 47 ಚಂದಾಪುರ ಗ್ರಾಮಠಾಣ, ಚಂದಾಪುರ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 30.00 ಎಕರೆ ಪ್ರದೇಶದಲ್ಲಿ, ವರ್ಷಕ್ಕೆ 1,32,418 ಟನ್‌ಗಳಷ್ಟು ಸಾಮರ್ಥ್ಯದ ಮರಳು ಗಣಿಗಾರಿಕೆ ಮಾಡಲು ಉದ್ದೇಶಿಸಿರುತ್ತಾರೆ.

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ, ಭಾರತ ಸರ್ಕಾರ ಇವರು ದಿನಾಂಕ: 14/09/2006 (ತಿದ್ದುಪಡಿ ದಿನಾಂಕ: 01/12/2009)ರಂದು ಹೊರಡಿಸಿರುವ ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ ಮತ್ತು ಇತರೆ ತಿದ್ದುಪಡಿ ಪ್ರಕಾರ, ಸದರಿ ಯೋಜನೆಗೆ ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ (SEIAA), ಕರ್ನಾಟಕದಿಂದ ಪರಿಸರ ವಿಮೋಚನ ಪತ್ರ ಪಡೆಯುವ

ಪೂರ್ವದಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ, ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವರು ಸದರಿ ಯೋಜನೆಗೆ Terms of References (ಟಿ.ಓ.ಅರ್) ಅನ್ನು ಪತ್ರ ಸಂಖ್ಯೆ: SEIAA 433 MIN 2021 ದಿನಾಂಕ 6/12/2021 ರಂದು ನೀಡಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆ ನಡೆಸಲು ಕೋರುವಂತೆ ಯೋಜನಾದಾರರಿಗೆ ತಿಳಿಸಿರುತ್ತಾರೆ. ಅದರಂತೆ ಈ ಯೋಜನೆಗೆ 'ಕರಡು ಪರಿಸರ ಆಘಾತ ಅಂದಾಜೀಕರಣ ವರದಿಯನ್ನು' ಹಾಗೂ ಇದರ ಕನ್ನಡ ಮತ್ತು ಇಂಗ್ಲೀಷ್ ಅವತರಣಿಕೆಯ ಸಂಕ್ಷಿಪ್ತ ವರದಿಯನ್ನು ಮಂಡಳಿಗೆ ಸಲ್ಲಿಸಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ದಿನಾಂಕ 01/02/2022 ರಂದು ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಯೋಜನೆಗೆ ಸಂಬಂಧಪಟ್ಟಂತೆ ಪರಿಸರ ಸಾರ್ವಜನಿಕ ಸಭೆಯನ್ನು ಉದ್ದೇಶಿತ ಯೋಜನಾ ಸ್ಥಳದಲ್ಲಿ ದಿನಾಂಕ: 27/06/2022 ರಂದು ಮಧ್ಯಾಹ್ನ 12:00 ಗಂಟೆಗೆ ನಿಗದಿಪಡಿಸಲಾಗಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಇಂಗ್ಲೀಷ್ ಪತ್ರಿಕೆಯಾದ **"ದಿ ಹಿಂದೂ"** ಮತ್ತು ಕನ್ನಡ ಪತ್ರಿಕೆಯಾದ **"ಪ್ರಜಾವಾಣಿ"** ದಿನ ಪತ್ರಿಕೆಗಳಲ್ಲಿ ದಿನಾಂಕ: 28/05/2022 ರಂದು ನೀಡಲಾಗಿರುತ್ತದೆ. ಅಲ್ಲದೇ ಸ್ಥಳೀಯರ ಮಾಹಿತಿಗಾಗಿ ಸ್ಥಳೀಯ ಕನ್ನಡ ದಿನ ಪತ್ರಿಕೆಯಾದ **"ಕೌರವ" ದಿನಪತ್ರಿಕೆ**ಯಲ್ಲೂ ಸಹ ದಿನಾಂಕ: 2/06/2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಪತ್ರಿಕಾ ಪ್ರಕಟಣೆಯಲ್ಲಿ, ಯೋಜನಾ ಸ್ಥಳದಲ್ಲಿ ವಾಸವಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆ, ಅಭಿಪ್ರಾಯ, ಟೀಕೆ–ಟಿಪ್ಪಣಿ ಹಾಗೂ ಅಹವಾಲುಗಳನ್ನು ಮೌಖಿಕವಾಗಿ/ಲಿಖಿತ/ ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಸಮಿತಿ (ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ) ಇವರಿಗೆ, ಅಧಿಸೂಚನೆ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಯೋಜನೆಯ ಪರಿಸರ ಆಘಾತ ಅಂದಾಜೀಕರಣ ವರದಿ ಹಾಗೂ ಕಾರ್ಯಕಾರಿ ಸಾರಾಂಶಗಳ ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ ಜಿಲ್ಲೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಹಾವೇರಿ ಜಿಲ್ಲೆ, ತಾಲ್ಲೂಕು ಪಂಚಾಯಿತಿ, ರಾಣೇಬೆನ್ನೂರು, ಗ್ರಾಮ ಪಂಚಾಯಿತಿ ಕಾರ್ಯಾಲಯ, ಚಂದಾಪುರ, ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಾವೇರಿ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಕೊಠಡಿ ಸಂಖ್ಯೆ: 706, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು ಹಾಗೂ ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್‌ಸ್ಟ್ರೀಟ್, ಬೆಂಗಳೂರು ಈ ಸ್ಥಳಗಳಲ್ಲಿ ಇಡಲಾಗಿತ್ತು.

ದಿನಾಂಕ 27/06/2022 ರಂದು ಮಧ್ಯಾಹ್ನ 12:00 ಗಂಟೆಗೆ ಹಾವೇರಿ ಜಿಲ್ಲೆ, ರಾಣೇಬೆನ್ನೂರು ತಾಲ್ಲೂಕಿನ ಚಂದಾಪುರ ಗ್ರಾಮದ ಉದ್ದೇಶಿತ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲಾಯಿತು. ಡಾ: ಸುಧಾ ಸೌಮ್ಯಲತ ಎಂ. ಕೆ, ಪರಿಸರ ಅಧಿಕಾರಿಗಳು, ಪ್ರಾದೇಶಿಕ ಕಛೇರಿ, ಹಾವೇರಿ ಇವರು ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಇವರು ಪರಿಸರ ಆಘಾತ ಅಧಿಸೂಚನೆ, 2006ರ ಅನ್ವಯ, ಸದರಿ ಪರಿಸರ ಸಾರ್ವಜನಿಕ ಸಭೆ ನಡೆಸಲು ತೆಗೆದುಕೊಂಡ ಕ್ರಮಗಳನ್ನು ವಿವರಿಸಿದರು ಮತ್ತು ಉದ್ದೇಶಿತ ಪ್ರಸ್ತಾವನೆಯು ಪರಿಸರ ಆಘಾತ ಅಧಿಸೂಚನೆ, 2006 ಮತ್ತು ತಿದ್ದುಪಡಿಯ ವ್ಯಾಪ್ತಿಯಲ್ಲಿ ಸೇರಿರುವುದರಿಂದ, ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ಸಭೆಯ ಉದ್ದೇಶವನ್ನು ವಿವರಿಸಿ, ಈ ಸಭೆಯನ್ನು ನಡೆಸಲು ಆಗಮಿಸಿದ್ದ ಡಾ: ಎನ್. ತಿಪ್ಪೇಸ್ವಾಮಿ, ಕ.ಆ.ಸೇ. ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಭೆ ಹಾವೇರಿ ಜಿಲ್ಲೆ, ಹಾವೇರಿ, ಶ್ರೀ ಶಿವಾನಂದ ಉಳ್ಳೇಗಡ್ಡಿ, ಉಪ ವಿಭಾಗಾಧಿಕಾರಿಗಳು, ಹಾವೇರಿ ವಿಭಾಗ, ಹಾವೇರಿ, ಶ್ರೀ ರಾಜಶೇಖರ ಪುರಾಣಿಕ, ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ, ಮಾಲಿನ್ಯ ನಿಯಂತ್ರಣ ಮಂಡಳಿ, ಧಾರವಾಡ, ಶ್ರೀ ಜಿ. ಎಸ್. ಶಂಕರ, ತಹಶೀಲ್ದಾರರು, ರಾಣೆಬೆನ್ನೂರ ಮತ್ತು ಸಭೆಯಲ್ಲಿ ಹಾಜರಿದ್ದ ಗಣ್ಯ ಮಾನ್ಯರಿಗೆ, ಜನಪ್ರತಿನಿಧಿಗಳಿಗೆ, ಪತ್ರಿಕಾ ಮಾಧ್ಯಮದವರಿಗೆ, ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸ್ಥಳದಲ್ಲಿ ಹಾಜರಿದ್ದ ಎಲ್ಲಾ ಸಾರ್ವಜನಿಕರನ್ನು ಮಂಡಳಿಯ ಪರವಾಗಿ ಸಭೆಗೆ ಸ್ವಾಗತಿಸಿದರು. ನಂತರ ಈ ಯೋಜನೆಯ ಬಗ್ಗೆ ಯೋಜನಾ ಪ್ರತಿಪಾದಕರು ತಮ್ಮೆಲ್ಲರ ಮುಂದೆ ಸದರಿ ಪ್ರಸ್ತಾವಿತ ಯೋಜನೆಯ ಕುರಿತು ಹಾಗೂ ಈ ಸುತ್ತಮುತ್ತಲಿನ ಪರಿಸರದಲ್ಲಿ ನಡೆಸಿರುವ ನೀರು, ಗಾಳಿ, ಶಬ್ದ, ಮಣ್ಣಿನ ಮಾದರಿಗಳ ಅಧ್ಯಯನ ಕುರಿತು ಹಾಗೂ ಪರಿಸರ ಸಂರಕ್ಷಣೆಗೆ ಉದ್ದಿಮೆದಾರರು ಕೈಗೊಳ್ಳುವ ಕ್ರಮಗಳ ಕುರಿತು ಪವರ್ ಪಾಯಿಂಟ್ ಪ್ರಜೆಂಟೇಶನ್‌ನ್ನು ತಮ್ಮ ಮುಂದೆ ಮಂಡಿಸುತ್ತಾರೆ ಎಂದು ತಿಳಿಸಿದರು. ಈ ಸಭೆಯಲ್ಲಿ ಉಪಸ್ಥಿತರಿರುವ ಸುತ್ತಮುತ್ತಲಿನ ಗ್ರಾಮಸ್ಥರು ಸಾರ್ವಜನಿಕರು ತಮ್ಮ ಸಲಹೆಗಳು ಅನಿಸಿಕೆಗಳು ಠೀಕೆ ಟಿಪ್ಪಣಿಗಳು ಏನಾದರೂ ಇದ್ದರೆ ಯಾವುದೇ ಭಯ, ಆತಂಕ, ಭೀತಿ ಇಲ್ಲದೇ ಈ ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಮುಂದೆ ಬಂದು ಮಂಡಿಸಬಹುದಾಗಿದೆ ಹಾಗೂ ಅದನ್ನೆಲ್ಲವನ್ನು ವಿಡಿಯೋ ಚಿತ್ರೀಕರಣ ಮಾಡಿ ಹಾಗೂ ಈ ಸಭೆಯಲ್ಲಿ ಮಂಡಿಸಲಾದ/ಚರ್ಚಿಸಲಾದ ಎಲ್ಲ ವಿಷಯಗಳ ಕುರಿತು ನಡಾವಳಿ ತಯಾರಿಸಿ ಅರಣ್ಯ ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರಿಗೆ ಸೂಕ್ತ ಪರಾಮರ್ಶೆಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗುವುದು ಎಂದು ಹೇಳಿದರು.

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಮೆ॥ ಸ್ನೇಹಾ ಹೈಟೆಕ್ ಪ್ರೊಡಕ್ಟ್ಸ್‌ನ ಪ್ರತಿನಿಧಿಯಾದ ಶ್ರೀ ಸಂಜೀವೆಗೌಡ ಇವರು, ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು ಇವರು ಚಂದಾಪುರ ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ತುಂಗಭದ್ರಾ ನದಿ ದಂಡೆ ಸ. ನಂ. 2 (ಪಿ) ಗ್ರಾಮಠಾಣ ಮತ್ತು 47 ಚಂದಾಪುರ ಗ್ರಾಮಠಾಣ, ಚಂದಾಪುರ ಗ್ರಾಮ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆಯಲ್ಲಿ ಒಟ್ಟು 30.00 ಎಕರೆ ಪ್ರದೇಶದಲ್ಲಿ, ವರ್ಷಕ್ಕೆ 1,32,418 ಟನ್‌ಗಳಷ್ಟು ಸಾಮರ್ಥ್ಯದ ಸಾಮಾನ್ಯ ಮರಳು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಉದ್ದೇಶಿತ ಮರಳು ಗಣಿಗಾರಿಕೆಯನ್ನು ಸಾಮಾನ್ಯ ಮರಳು ಗಣಿಗಾರಿಕೆ ವಿಧಾನದಲ್ಲಿ ಮಾಡಲಾಗುವುದು. ಹಿಟಾಚಿ ಮತ್ತು ಜೆಸಿಬಿಯನ್ನು ಅಗೆಯಲು ಮತ್ತು

ಲೋಡ್ ಮಾಡುವ ಚಟುವಟಿಕೆಗಳಿಗೆ ಬಳಸಲಾಗುವುದೆಂದು ಸಭೆಗೆ ತಿಳಿಸಿದರು. ಸದರಿ ಯೋಜನೆ ಕುರಿತಾದ ಪ್ರಮುಖ ಅಂಶಗಳು, ಯೋಜನೆಯಿಂದ ಸುತ್ತಲಿನ ಪರಿಸರಕ್ಕೆ ಆಗಬಹುದಾದ ಪರಿಣಾಮ, ಪರಿಸರ ನಿರ್ವಹಣೆ, ಮಾಲಿನ್ಯ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗುವ ಕ್ರಮಗಳು, ಸಿಎಸ್‌ಆರ್ ಚಟುವಟಿಕೆಗಳ ಕುರಿತು ಸಭೆಗೆ ವಿವರಿಸಿದರು. ಸಭೆಯಲ್ಲಿ ಪ್ರಸ್ತುತ ಪಡಿಸಲಾದ ಪ್ರಸ್ತಾವನೆಯ ಪ್ರತಿಯನ್ನು ಅನುಬಂಧ-4ರಲ್ಲಿ ಲಗತ್ತಿಸಿದೆ.

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಮೆ॥ ಸ್ನೇಹಾ ಹೈಟೆಕ್ ಪ್ರೋಡಕ್ಟ್ಸ್‌ನ ಶ್ರೀ ಸಂಜೀವೆಗೌಡ ಇವರು, ಯೋಜನೆಯ ವಿವರವನ್ನು ಸಭೆಗೆ ತಿಳಿಸಿದ ನಂತರ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಈಗಾಗಲೇ ತಮಗೆ ವಿವರವಾದಂತಹ ಒಂದು ಪ್ರಜೆಂಟೇಶನ್ ಕೊಟ್ಟಿದ್ದಾರೆ. ಇಲ್ಲಿ ತಮಗೆ ಗೊತ್ತಿರುವ ಹಾಗೆ ಈಗಾಗಲೇ ಗಣಿಗಾರಿಕೆ ನಡೆಯುತ್ತಾ ಇದೆ. ಅದು ಸರ್ಕಾರದ ಅನುಮತಿಯಿಲ್ಲದೆ ಬಹಳಷ್ಟು ಅವೈಜ್ಞಾನಿಕ ಪದ್ಧತಿಯಿಂದ ಮರಳುಗಣಿಗಾರಿಕೆ ಮಾಡಿ ಪರಿಸರಕ್ಕೆ ಹಾನಿ ಉಂಟು ಮಾಡಿದ್ದಾರೆ. ಸರ್ಕಾರಕ್ಕೂ ಕೂಡ ಬಹಳಷ್ಟು ಹಾನಿ ಆಗಿದೆ. ಆ ಕಾರಣಕ್ಕಾಗಿ ಹೊಸ ಮರಳುಗಣಿಗಾರಿಕೆ ನೀತಿ ಅಡಿಯಲ್ಲಿ ಮೆ: ಹಟ್ಟಿ ಗೋಲ್ಡ್ ಮೈನ್ಸ್‌ರವರಿಗೆ ಸರಿಯಾದ ರೀತಿಯಲ್ಲಿ ಗಣಿಗಾರಿಕೆ ಮಾಡಿ ಸಾರ್ವಜನಿಕರಿಗೆ ಸರಿಯಾದ ಯೋಗ್ಯವಾದ ದರದಲ್ಲಿ ಅಂದರೆ ಪ್ರತಿ ಟನ್ನಿಗೆ 700/- ರೂಪಾಯಿಗೆ ಸುಲಭವಾಗಿ ಮರಳು ಸಿಗಬೇಕು. ಅದರಿಂದ ಮುಂದೆ ಅವರು ಆ್ಯಪ್ ಕೂಡ ಮಾಡಲಿದ್ದಾರೆ. ಮರಳಿನ ಆ್ಯಪ್, ಅದರಿಂದ ತಾವು ಮನೆಯಲ್ಲಿದ್ದುಕೊಂಡೇ ಮೊಬೈಲ್ ಮೂಲಕ ಮರಳು ನಿಮಗೆ ಎಷ್ಟು ಬೇಕು, ಎಲ್ಲಿ ಡೆಲಿವರಿ ಮಾಡಬೇಕು ಅನ್ನುವುದನ್ನು ಎಂಟ್ರಿ ಮಾಡಿದರೆ ನೇರವಾಗಿ ಆ ಜಾಗಕ್ಕೆ ಅವರು ಮರಳು ತಲುಪಿಸುತ್ತಾರೆ ಮತ್ತು ಹಣ ಕೂಡ ಆನ್‌ಲೈನ್‌ನಲ್ಲಿ ಪೇಮೆಂಟ್ ಮಾಡಲು ಅವಕಾಶವಿರುತ್ತದೆ. ಯಾವುದೇ ರೀತಿ ಕದ್ದುಮುಚ್ಚಿ ಮಾರಾಟವಾಗಲು ಅವಕಾಶವಿರುವುದಿಲ್ಲ. ಇದು ಸರಕಾರಿ ಕಂಪನಿಯಾಗಿರುವುದರಿಂದ ಇವರು ಪರಿಸರದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಾರೆ ಮತ್ತು ಸುತ್ತಮುತ್ತಲಿನ ಗ್ರಾಮದ ಯುವಕರಿಗೆ ಪರ್ಯಾಯವಾಗಿ ಕೆಲವೊಂದು ಹೆಚ್ಚುವರಿ ಉದ್ಯೋಗಗಳು ದೊರಕಬಹುದು. ಸಾರ್ವಜನಿಕರು ತಮ್ಮ ಆಕ್ಷೇಪಣೆ ಏನಾದರೂ ಇದ್ದರೆ ಲಿಖಿತವಾಗಿ ಇಲ್ಲಿ ಕೊಡಬಹುದು ಅಥವಾ ತಾವು ಇಲ್ಲೇ ಮಾತನಾಡುವುದಿದ್ದರೆ ನೀವು ಏನು ಹೇಳುತ್ತೀರಿ ಅದನ್ನು ನಾವು ದಾಖಲಿಸಿಕೊಳ್ಳುತ್ತೇವೆ. ಈ ಸಭೆಯಲ್ಲಿ ಮುಖ್ಯವಾಗಿ ತಮ್ಮ ಆಕ್ಷೇಪಣೆಗಳನ್ನು ದಾಖಲಿಸಿಕೊಳ್ಳುವುದು. ನಿರ್ಣಯವನ್ನು ಇಲ್ಲಿ ಯಾವುದೂ ನಾವು ಮಾಡುವುದಿಲ್ಲ ಅದನ್ನು ರಾಜ್ಯ ಸರ್ಕಾರದ ಮಟ್ಟದಲ್ಲಿ ಅದರ ಬಗ್ಗೆ ತಜ್ಞರು ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತಾರೆ. ತಮಗೇನಾದರೂ ಮಾತನಾಡುವುದಿದ್ದಲ್ಲಿ ಇಲ್ಲಿ ಒಬ್ಬೊಬ್ಬರಾಗಿ ಬಂದು ತಮ್ಮ ಹೆಸರು ಮತ್ತು ಊರಿನ ಹೆಸರನ್ನು ಹೇಳಿ ನೇರವಾಗಿ ವಿಷಯವನ್ನು ಪ್ರಸ್ತಾಪ ಮಾಡಬೇಕು ಮತ್ತು ಬರವಣಿಗೆಯಲ್ಲಿ ಕೊಡುವವರು ನಮಗೆ ನೇರವಾಗಿ ಕೊಡುವಂತೆ ಸಭೆಯಲ್ಲಿದ್ದರಿಗೆ ತಿಳಿಸಿದರು.

ಯೋಜನೆಯ ಪ್ರತಿನಿಧಿಗಳು ಉದ್ದೇಶಿತ ಯೋಜನೆಯನ್ನು ಪ್ರಸ್ತುತಪಡಿಸಿದ ನಂತರ ಈ ಕೆಳಕಂಡಂತೆ ಸಾರ್ವಜನಿಕರು ತಮ್ಮ ಅಭಿಪ್ರಾಯ ಮತ್ತು ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

(1) ಶ್ರೀ ಸೋಮಪ್ಪ ಚನ್ನಪ್ಪ ಬಾಡೀನ, ಚಂದಾಪುರ ಗ್ರಾಮ

ಇವರು ಮಾತನಾಡುತ್ತಾ ನದಿ ಪಾತ್ರದಲ್ಲಿ ಒಂದು ಮೀಟರ್ ಆಳದಲ್ಲಿ ಗಣಿಗಾರಿಕೆ ಮಾಡುವಾಗ ಸ. ನಂ. 47 ರಲ್ಲಿ ಸುಮಾರು 150 ರಿಂದ 200 ಪಂಪ್‌ಸೆಟ್ ಮೋಟರ್‌ಗಳಿದ್ದು, ಐದು, ಹತ್ತು ಮೀಟರ್‌ಗಳ ಅಂತರದಲ್ಲಿ ಪೈಪ್‌ಲೈನ್‌ಗಳಿರುತ್ತವೆ ಅವುಗಳು 3 ರಿಂದ 31/2 ಫೂಟ್ ಆಳದಲ್ಲಿದ್ದು ವಾಹನಗಳ ಓಡಾಟದಿಂದ ಪೈಪ್‌ಗಳು ಹಾಳಾಗುತ್ತವೆ ಎಂದು ಆತಂಕ ವ್ಯಕ್ತ ಪಡಿಸಿದರು.

ಇದಕ್ಕೆ ಉತ್ತರವಾಗಿ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯ ಪ್ರತಿನಿಧಿ ಶ್ರೀ ರಾಘವ ಟಿ. ಜೆ. ಇವರು ಮಾತನಾಡುತ್ತಾ ಸರಕಾರಿ ಭೂಮಿಯಲ್ಲಿ ಮಾತ್ರ ಮರಳೆತ್ತುವ ಕೆಲಸವನ್ನು ಮಾಡಲಾಗುವುದು. ಆ ಜಾಗದ ಸುತ್ತಲೂ ಬೇಲಿಯನ್ನು ಮಾಡಿ ಅಲ್ಲಿರುವ ವೈರ್‌ಗಳು ಮತ್ತು ಪೈಪ್‌ಲೈನ್‌ಗಳಿಗೆ ಯಾವುದೇ ತೊಂದರೆಯಾಗದಂತೆ ಸುರಕ್ಷತಾ ಕ್ರಮ ಕೈಗೊಂಡು ಅವುಗಳನ್ನು ಸ್ಥಳಾಂತರ ಮಾಡಿ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

(2) ಶ್ರೀ ಸೋಮಶೇಖರ ಕಾಳಪ್ಪನವರ, ಚಂದಾಪುರ ಗ್ರಾಮ

ಇವರು ಮಾತನಾಡುತ್ತಾ, ಸ್ಥಳೀಕರಾದ ನಮಗೆ ಉಚಿತವಾಗಿ ಮರಳನ್ನು ನೀಡಬೇಕೆಂದು ಕೇಳಿದರು. ಇದಕ್ಕೆ ಉತ್ತರವಾಗಿ ಅಪರ ಜಿಲ್ಲಾಧಿಕಾರಿಗಳು ಮರಳಿನ ಮಾರಾಟವಾದ ಮೊತ್ತದಲ್ಲಿ ರಾಜಧನದ ಶೇಕಡಾ 25ರಷ್ಟು ಮೊತ್ತವನ್ನು ಗ್ರಾಮಪಂಚಾಯಿತಿಗೆ ನೀಡಲಾಗುವುದು. ಅದರಲ್ಲಿ ಗ್ರಾಮ ಪಂಚಾಯಿತಿಯವರ ವತಿಯಿಂದ ಇಡೀ ಗ್ರಾಮದಲ್ಲಿ ರಸ್ತೆ, ಬೀದಿ ದೀಪ, ಚರಂಡಿ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಈ ಊರಿನವರಿಗೆ ಉಚಿತವಾಗಿ ಮರಳನ್ನು ಕೊಡಲು ಅವಕಾಶವಿರುವುದಿಲ್ಲ. ಇದೇ ಊರಿನಲ್ಲಿ ಮಾರಾಟ ಮಾಡುವುದರಿಂದ ಸಾಗಾಣಿಕೆಯ ವೆಚ್ಚ ಉಳಿಯುತ್ತದೆ ಎಂದರು. ಆದಷ್ಟು ಕಡಿಮೆ ದರದಲ್ಲಿ ಕಂಪನಿಯ ಕಾಯ್ದೆ ಮತ್ತು ನಿಬಂಧನೆಗಳಿಗನುಗುಣವಾಗಿ ಮರಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

(3) ಶ್ರೀ ಶಿವಣ್ಣ ಮಳ್ಳೂರು, ಚಂದಾಪುರ ಗ್ರಾಮ

ಇವರು ಮಾತನಾಡುತ್ತಾ, ಗ್ರಾಮ ಅಭಿವೃದ್ಧಿ ಎಂದರೆ ಈ ಗ್ರಾಮ ಪಂಚಾಯಿತಿಗೆ ಮಾತ್ರವೇ ಅಥವಾ ಈ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಎಲ್ಲ ಗ್ರಾಮಗಳಿಗೂ ಅನ್ವಯವಾಗಿತ್ತದೆಯೇ ಎಂದು ಪ್ರಶ್ನಿಸಿದಾಗ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಉತ್ತರಿಸುತ್ತಾ ನದಿಯ ಭಾಗವು ಒಂದು ಕೀಲೋಮಿಟರ್ ಅಂದರೆ ಸುಮಾರು 830 ಮೀಟರ್ ಇದ್ದು ಈ ಭಾಗಕ್ಕೆ ಬರುವ ಗ್ರಾಮ ಪಂಚಾಯತಿ ಅಂದು ಕೊಳ್ಳಬಹುದು ಎಂದು ಹೇಳಿದರು.

(4) ಶ್ರೀ ಸೋಮಣ್ಣ ಕುದರಿಹಾಳ, ಚಂದಾಪುರ ಗ್ರಾಮ

ಇವರು ಮಾತನಾಡುತ್ತಾ, ಈ ಊರಲ್ಲಿ ದೊಡ್ಡ ಪ್ರಮಾಣದ ಜಾತ್ರೆಯಾಗುತ್ತದೆ. ಬಂದಂತಹ ಭಕ್ತಾಧಿಗಳು ಸದರಿ ಸ್ಥಳದಲ್ಲಿ ತಾತ್ಕಾಲಿಕ ಬೀಡು ಹಾಕಿಕೊಳ್ಳುತ್ತಾರೆ. ನೀವು ಆಳವಾದ ಗುಂಡಿಗಳನ್ನು ತೋಡಿದಾಗ ಅದರಿಂದ ಅಪಘಾತಗಳಾಗುವುದೆಂದು ನಮಗೆ ಭಯ ಎಂದರು. ಇದಕ್ಕೆ ಉತ್ತರವಾಗಿ ಮೆ: ಹಟ್ಟಿ ಗೋಲ್ಡ್ ಮೈನ್ ಕಂಪನಿಯ ಪ್ರತಿನಿಧಿ ಶ್ರೀ ರಾಘವ ಟಿ. ಜೆ., ಇವರು ಮಾತನಾಡುತ್ತಾ ನಾವು ನದಿ ದಡದಲ್ಲಿ ಮಾತ್ರ ಗಣಿಗಾರಿಕೆ ಮಾಡುತ್ತೇವೆ. ನೀರಿನಲ್ಲಿ ಇಳಿಯುವುದಿಲ್ಲ. ದಡದಲ್ಲಿ ಶೇಖರಣೆಯಾದ ಒಂದು ಮೀಟರ್ ಆಳದಲ್ಲಿ ಮಾತ್ರ ಮರಳು ಗಣಿಗಾರಿಕೆಯನ್ನು ಮಾಡುತ್ತೇವೆ ಎಂದು ತಿಳಿಸಿದರು.

(5) ಶ್ರೀ ಸೋಮಪ್ಪ ಚನ್ನಪ್ಪ ಬಾಡೀನ, ಚಂದಾಪುರ ಗ್ರಾಮ

ಇವರು ಮಾತನಾಡುತ್ತಾ ನದಿಯಿಂದ ಸ. ನಂ. 47ರ ವರೆಗೆ ಅಂದರೆ ಎಷ್ಟು ಅಗಲವಾಗುತ್ತದೆ ಎಂದು ಕೇಳಿದರು. ಅದಕ್ಕೆ ಮೆ: ಸ್ನೇಹಾ ಹೈಟೆಕ್ ಪ್ರೋಡಕ್ಟ್ಸ್ ಕಂಪನಿಯ ಶ್ರೀ ಸಂಜೀವೆಗೌಡ ಇವರು ನಕ್ಷೆಯನ್ನು ತೋರಿಸುತ್ತಾ ಅವರಿಗೆ ವಿವರವಾಗಿ ಅರ್ಥೈಸಿದರು.

ಶ್ರೀ ಸೋಮಪ್ಪ ಚನ್ನಪ್ಪ ಬಾಡೀನ ಇವರು ಮತ್ತೆ ಮಾತನಾಡುತ್ತಾ ಚಂದಾಪುರ ಗ್ರಾಮದ ಗ್ರಾಮಸ್ಥರು ಈ ಮೊದಲು ಬಂಡಿಯಲ್ಲಿ ಮರಳನ್ನು ತುಂಬಿ ಉಪಯೋಗಿಸಿಕೊಳ್ಳುತ್ತಿರುತ್ತಾರೆ. ಇನ್ನು ಮುಂದಿನ ದಿನಮಾನಗಳಲ್ಲಿ ಬಂಡಿಯಲ್ಲಿ ಮರಳು ತುಂಬುವವರು ಏನು ಮಾಡಬೇಕು ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ಮೆ: ಸ್ನೇಹಾ ಹೈಟೆಕ್ ಪ್ರೋಡಕ್ಟ್ಸ್ ಕಂಪನಿಯ ಶ್ರೀ ಸಂಜೀವೆಗೌಡ ಇವರು ಮಾತನಾಡುತ್ತಾ ಹಳ್ಳಗಳಿರುತ್ತವೆ, ಅಲ್ಲಿ ಪಂಚಾಯಿತಿಯವರ ಪರವಾನಗಿ ಪಡೆದು ಮರಳನ್ನು ತೆಗೆಯಬಹುದಾಗಿರುತ್ತದೆ ಆದರೆ ನದಿಗಳಲ್ಲಲ್ಲ. ಮತ್ತೆ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಸರಕಾರ ಇನ್ನು ಮುಂದೆ ವ್ಯವಸ್ಥಿತವಾದ ಮರಳು ಗಣಿಗಾರಿಕೆ ಮಾಡುತ್ತದೆ. ಆದ್ದರಿಂದ ಬಂಡಿಯಲ್ಲಿ ಮರಳನ್ನು ಸಾಗಿಸುವಂತಿಲ್ಲ. ನಿಮಗೆ ಮರಳು ಬೇಕಾದರೆ ಸರ್ಕಾರದಿಂದ ಕೇಳಿ ಪಡೆದುಕೊಳ್ಳಬೇಕು ಎಂದರು.

ಶ್ರೀ ಸೋಮಪ್ಪ ಚನ್ನಪ್ಪ ಬಾಡೀನ ಇವರು ಮತ್ತೆ ಮಾತನಾಡುತ್ತಾ ಗ್ರಾಮಸ್ಥರಿಗೆ ಕಡಿಮೆ ದರದಲ್ಲಿ ಮರಳನ್ನು ಕೊಡುವಂತೆ ಕೇಳಿದರು. ಇದಕ್ಕೆ ಉತ್ತರವಾಗಿ ಅಪರ ಜಿಲ್ಲಾಧಿಕಾರಿಗಳು ಕಡಿಮೆ ದರದಲ್ಲಿ ಅಂದರೆ ಸರ್ಕಾರ ನಿಗದಿ ಪಡಿಸಿದ ಒಂದು ದರದಲ್ಲಿ ನೀಡಲಾಗುತ್ತದೆ ಎಂದು ತಿಳಿಸಿದರು.

ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯ ಶ್ರೀ ರಾಘವ, ಹಿರಿಯ ಅಭಿಯಂತರರು (ಪರಿಸರ), ಇವರು ನೆರೆದವರನ್ನು ಉದ್ದೇಶಿಸಿ ಮಾತನಾಡುತ್ತಾ ಎಲ್ಲರಿಗೂ ಸಮನಾಗಿ ಮರಳು ಸಿಗುವಂತಾಗುವ ಯೋಜನೆ ಇದಾಗಿದೆ. ಇದಕ್ಕೆ ಬೇಕಾಗುವಂತಹ ಎಲ್ಲಾ ಉಪಕ್ರಮಗಳನ್ನು ನಾವು ಮಾಡಿಕೊಂಡು ಸರ್ವರಿಗೂ ಸಮನಾಗಿ ಈ ಮರಳು ದೊರೆಯಲಿ ಎನ್ನುವ ಉದ್ದೇಶದಿಂದ, ಇದರ ಜೊತೆಯಲ್ಲಿ, ಈಗಾಗಲೇ ನೀವು ಕೇಳಿದಿರಿ ಇದರಿಂದ ನಮ್ಮ ಹಳ್ಳಿಗೆ ಏನು ಉಪಯೋಗ ಆಗುತ್ತದೆ ಎಂದು. ಈಗ

ನಿಮಗೆಲ್ಲ ಗೊತ್ತಿದೆ ಮರಳು ತೆಗೆಯುವುದರಿಂದ ಟ್ಯಾಕ್ಸನ್ನು ಸರ್ಕಾರಕ್ಕೆ ಕಟ್ಟಬೇಕು. ಈಗ ಸರ್ಕಾರಕ್ಕೆ ಯಾವುದೇ ತರಹದ ಆದಾಯ ಆಗುತ್ತಿಲ್ಲ ಇನ್ನು ಮುಂದೆ ನಾವು ಇದನ್ನೆಲ್ಲ ಕಂಪ್ಯೂಟರೀಕರಣಗೊಳಿಸುತ್ತಾ ಇದ್ದೇವೆ. ಪ್ರತಿಯೊಂದು ಮರಳಿಗೆ ಲೆಕ್ಕ ಇರುತ್ತದೆ. ಇದರಿಂದ ರಾಜ್ಯಕ್ಕೆ ಆದಾಯ ಆಗುತ್ತದೆ, ಸರ್ಕಾರದ ವತಿಯಿಂದ ಪ್ರತಿಯೊಂದು ಗ್ರಾಮಕ್ಕೂ ಆದಾಯದ ಭಾಗವನ್ನು ಕೊಡಲಾಗುತ್ತದೆ. ಆ ಹಣದಿಂದ ಗ್ರಾಮದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದೆಂದು ತಿಳಿಸಿದರು. ನಾವು ಶಾಲಾ ಕಾಲೇಜುಗಳ ಅಭಿವೃದ್ಧಿಗಾಗಿ ಹಣವನ್ನು ಮೀಸಲಿಟ್ಟಿದ್ದೇವೆ. ಹಾಗೆಯೇ ಸಮುದಾಯ ಸ್ಥಳಗಳು ಮತ್ತು ಕುಡಿಯುವ ನೀರು, ರಸ್ತೆ, ಅರಣ್ಯೀಕರಣ ಈ ಎಲ್ಲಾ ಕೆಲಸಗಳಿಗೆ ಖರ್ಚನ್ನು ಮಾಡುತ್ತಾ ಈ ಗ್ರಾಮದ ಉದ್ಧಾರದ ಜೊತೆಯಲ್ಲಿ ಗಣಿಗಾರಿಕೆಯನ್ನು ಮಾಡುವ ವ್ಯವಸ್ಥೆ ಇದಾಗಿದೆ ಎಂದು ಹೇಳುತ್ತಾ ತಮ್ಮೆಲ್ಲರಿಗೂ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ ಎಂದು ಹೇಳಿದರು. ಮುಂದುವರೆದು, ಸಭೆಯಲ್ಲಿ ಒಬ್ಬರು ಪ್ರಸ್ತಾಪಿಸಿದ ವಿಷಯ ಗಣಿಗಾರಿಕೆಯಿಂದ ಪಂಪ್‌ಸೆಟ್‌ಗೆ ಹಾಕಿರುವಂತಹ ಪೈಪು ಮತ್ತು ವೈರು ಬಗ್ಗೆ ನಾವು ಮೊದಲು ಕಂಪನಿ ವತಿಯಿಂದ ಬೌಂಡರಿಯನ್ನು ಗುರುತಿಸಿ ರೈತರ ಪಂಪ್‌ಸೆಟ್, ಪೈಪುಗಳು ಮತ್ತು ವೈರುಗಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮಗಳನ್ನು ತೆಗೆದುಕೊಂಡು ಯಾವುದೂ ಕೂಡ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಶಿಫ್ಟ್ ಮಾಡುವಂತಹ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸಾರ್ವಜನಿಕರು ಹೇಳಿದ ಅಭಿಪ್ರಾಯಗಳನ್ನು ವೀಡಿಯೋ ರೆಕಾರ್ಡ್ ಮಾಡಿದ್ದು, ಹೇಳಿದ ಎಲ್ಲಾ ಆಕ್ಷೇಪಣೆಗಳನ್ನು ಮತ್ತು ಅಹವಾಲನ್ನು ದಾಖಲಿಸಿ, ಸಭೆಯ ನಡಾವಳಿಯೊಂದಿಗೆ ವೀಡಿಯೋ ಸಿಡಿ, ಛಾಯಾ ಚಿತ್ರಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರ ಮುಖಾಂತರ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ರವಾನಿಸುವುದಾಗಿ ತಿಳಿಸಿದರು.

ಸಭೆಗೆ ಆಗಮಿಸಿದ್ದ ಎಲ್ಲರಿಗೂ ಶ್ರೀ ರಾಘವ, ಹಿರಿಯ ಅಭಿಯಂತರರು (ಪರಿಸರ), ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿ, ಇವರು ವಂದಿಸಿದರು. ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಡಾ: ಎನ್. ತಿಪ್ಪೇಸ್ವಾಮಿ, ಕ.ಆ.ಸೇ.
ಅಪರ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ಪರಿಸರ ಸಾರ್ವಜನಿಕ ಸಭೆ, ಹಾವೇರಿ ಜಿಲ್ಲೆ